**ದಿನಾಂಕಃ 16-01-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದೂವರೆದ ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದಃ**

5. ರಾಣೇಬೆನ್ನೂರಿನಿಂದ ನಾನು ಶಿರಾಳಕೊಪ್ಪ ಗ್ರಾಮಕ್ಕೆ ಹೋಗಿರುತ್ತೇನೆ. ನಾನು ಸಾಲ ಪಡೆದು, ಖರೀದಿಸಿದ್ದ ಆಟೋವನ್ನು ಮಾರಾಟ ಮಾಡಿ, ಶಿರಾಳಕೊಪ್ಪಕ್ಕೆ ಹೋಗಿದ್ದೆ. ಸದರಿ ಆಟೋವನ್ನು ನಾನು 85 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ್ದೆ. ಶಿರಾಳಕೊಪ್ಪದ ಫಾರುಕ್ ಅಲಿ ಎನ್ನುವವರ ವೆಲ್ಡಿಂಗ್ ಶಾಪ್ ನಲ್ಲಿ ಸಹಾಯಕ ಎಂದು ಕೆಲಸ ಮಾಡಲು ನಾನು ಹೋಗಿದ್ದೆ. ಶಿರಾಳಕೊಪ್ಪಕ್ಕೆ ನಾನೊಬ್ಬನೇ ಹೋಗಿದ್ದೆ. ನನ್ನ ಹೆಂಡತಿ ಮಕ್ಕಳು ರಾಣೇಬೆನ್ನೂರಿನಲ್ಲಿಯೇ ಇದ್ದರು. ಶಿರಾಳಕೊಪ್ಪದಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಪಡೆದು, ಅಲ್ಲಿ ವಾಸಿಸುತ್ತಿದ್ದೆ. ಆ ಸಮಯದಲ್ಲಿ ಅರ್ಜಿದಾರಳು ಅಲ್ಲಿಗೆ ಬಂದು ತನಗೆ ಕಷ್ಟ ಇದೆ ಮತ್ತು ನಿಮ್ಮ ಮನೆಯಲ್ಲಿ 4 ದಿನಗಳ ವರೆಗೆ ಇರುತ್ತೇನೆ ಎಂದು ಹೇಳಿ, ಸ್ವಲ್ಪ ದಿನಗಳವರೆಗೆ ನನ್ನ ಕೋಣೆಯಲ್ಲಿಯೇ ಇದ್ದಳು. ಆಕೆ ನನ್ನ ರೂಂನಲ್ಲಿದ್ದ 85 ಸಾವಿರ ರುಪಾಯಿಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾಳೆ. ಸದರಿ ಹಣವನ್ನು ನಾನು ಮರಳಿ ಕೇಳಿದಾಗ ಆಕೆ ಶಿರಾಳಕೊಪ್ಪ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ಧ ಮೌಖಿಕ ದೂರು ಸಲ್ಲಿಸಿದ್ದಳು. ಅಲ್ಲಿ ಪೋಲಿಸರು ನನ್ನನ್ನು ವಿಚಾರಣೆಗೆ ಕರೆಯಿಸಿದ್ದರು, ಆಕೆಯು ನನ್ನ ಹೆಂಡತಿ ಅಲ್ಲ ಮತ್ತು ನನಗೆ ತೊಂದರೆ ನೀಡುತ್ತಿದ್ದಾಳೆ ಎಂದು ನಾನು ಪೋಲಿಸರಿಗೆ ಹೇಳಿದ್ದೆ. ಆದ್ದರಿಂದ ಪೋಲಿಸರು ಆಕೆಗೆ ಬೈದು, ಬುದ್ದಿಮಾತು ಹೇಳಿ ಕಳುಹಿಸಿದ್ದರು. ಆನಂತರ ಅರ್ಜಿದಾರಳು ರಾಣೇಬೆನ್ನೂರಿನ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ಧ ಸುಳ್ಳು ವರದಕ್ಷಿಣೆ ಕಿರುಕುಳ ಆರೋಪ ಮಾಡಿ ದೂರು ಸಲ್ಲಿಸಿದಳು.

6. ನಂತರ ಒಂದು ದಿನ ಅರ್ಜಿದಾರಳು ಶಿರಾಳಕೊಪ್ಪಕ್ಕೆ ಬಂದು ನನ್ನ ಮೇಲೆ ಹಲ್ಲೆ

ಮಾಡಿರುತ್ತಾಳೆ. ಆ ಕುರಿತು ಮೊಬೈಲ್ ಫೋನ್ ನಲ್ಲಿ ವಿಡಿಯೋ ರೆಕಾರ್ಡಿಂಗ್ ಮಾಡಿಕೊಂಡಿದ್ದು, ಅದರ ಕುರಿತು ಸಿಡಿಯನ್ನು ಹಾಜರು ಪಡಿಸಿರುತ್ತೇನೆ. ನನ್ನ ಹೆಂಡತಿ ಮಕ್ಕಳನ್ನು ಸಾಕುವ ಹಾಗೂ ಮಕ್ಕಳ ಶಿಕ್ಷಣ ಖರ್ಚು ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲೆ ಇದೆ. ಅರ್ಜಿದಾರಳನ್ನು ನಾನು ಮದುವೆಯಾಗಿಲ್ಲ ಮತ್ತು ಯಾವುದೇ ದಾಖಲೆ ಬರೆದುಕೊಟ್ಟಿಲ್ಲ.

7. ತನ್ನ ಗಂಡನಾದ ಮುನೀರ್ ಖಾಜಿ ಮರಣ ಹೊಂದಿದ್ದಾನೆ ಎಂದು ಹೇಳಿ ಅರ್ಜಿದಾರಳು ತಹಶೀಲ್ದಾರ ಕಚೇರಿಯಿಂದ ವಿಧವಾ ವೇತನ ಪಡೆಯುತ್ತಿದ್ದಾಳೆ. ಅದರ ಕುರಿತು ದಾಖಲೆ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಗುರುತಿಸಲು ಕೇಳಿಕೊಳ್ಳುತ್ತೇನೆ. ಸಾಕ್ಷಿದಾರರು ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

2 ನೇ ಎದುರುದಾರಳ ಆಧಾರ ಕಾರ್ಡನ ಪ್ರತಿಯನ್ನು ನಿಆರ್–1 ಎಂದು, ಜೈನಾಬ್ ಬಿ ಅವರ ಅಂಕಪಟ್ಟಿಯ ಪ್ರತಿಯನ್ನು ನಿಆರ್–2 ಎಂದು, ಜೈನಾಬ್ ಬಿ ಅವರ ಆಧಾರ ಕಾರ್ಡನ ಪ್ರತಿಯನ್ನ ನಿ.ಆರ್–3 ಎಂದು, ಖದೀರ್ ಅಹಮದ್ ಅವರ ಪಿಯುಸಿ ಅಂಕಪಟ್ಟಿಯ ಪ್ರತಿಯನ್ನು ನಿಆರ್–4 ಎಂದು, ಖದೀರ್ ಅಹಮದ್ ಅವರ ಆಧಾರ ಕಾರ್ಡನ ಪ್ರತಿಯನ್ನು ನಿಆರ್–5 ಎಂದು, ಖ್ವಾಜಾ ಅಹಮದ್ ಅವರ ಪಿಯುಸಿ ಅಂಕಪಟ್ಟಿಯ ಪ್ರತಿಯನ್ನು ನಿಆರ್–6 ಎಂದು, ವಿಧವಾ ವೇತನದ ಕುರಿತು ತಹಶೀಲ್ದಾರ ರಾಣೇಬೆನ್ನೂರು ಅವರು ನೀಡಿರುವ ದಾಖಲೆಯ ಪ್ರತಿಯನ್ನು ನಿಆರ್–7 ಎಂದು, ಕಲಂಃ 65 ಭಾರತೀಯ ಸಾಕ್ಷ್ಯ ಅಧಿನಿಯಮದೊಂದಿಗೆ ಹಾಜರು ಪಡಿಸಿರುವ 1 ಸಿ.ಡಿಯನ್ನು ತಕರಾರಿಗೆ ಒಳಪಟ್ಟು ನಿಆರ್–8 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ_ಸವಾಲುಃ_ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/–

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.